# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: LP.No. Ad.Com/WST/0605/19-20

CCMO/0017/19-20

ಸಹಾಯಕ ನಿರ್ದೇಶಕರವರ ಕಛೇರಿ,
ನಗರ ಯೋಜನೆ (ಪಶ್ಚಿಮ),
ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ,
ಬೆಂಗಳೂರು, ದಿನಾಂಕ: 27/12/19.

ಅನುಸೂಚಿ-(VII)

(ಉಪವಿಧಿ ಸಂಖ್ಯೆ: 5.3)

"ಪ್ರಾರಂಭಿಕ ಪ್ರಮಾಣ ಪತ್ರ"

ವಿಷಯ:- ಸ್ವತ್ತಿನ ಸಂಖ್ಯೆ: ನಂ.17 (758), 8ನೇ ಅಡ್ಡರಸ್ತೆ, ಎಂಆರ್‌ಸಿಆರ್, ಗೋವಿಂದರಾಜನಗರ, ಬೆಂಗಳೂರು,ವಾರ್ಡ್ ಸಂಖ್ಯೆ:44. ಇಲ್ಲಿ ನಿರ್ಮಿಸಲಾಗುತ್ತಿರುವ "ವಾಣಿಜ್ಯ ಹಾಗೂ ಹಾಸ್ಟೆಲ್" ಕಟ್ಟಡಕ್ಕೆ 'ಪ್ರಾರಂಭಿಕ ಪ್ರಮಾಣ ಪತ್ರ' ನೀಡುವ ಬಗ್ಗೆ.

ಉಲ್ಲೇಖ:- 1) ನಕ್ಷೆ ಮಂಜೂರಾತಿ ಸಂಖ್ಯೆ: Ad.Com/WST/0605/19-20, Date:04/11/2019.
2) ಅರ್ಜಿದಾರರ ಮನವಿ ದಿನಾಂಕ: 25/11/2019.
3) ದಿನಾಂಕ: 18/12/2019ರ ನಕ್ಷೆ ಮಂಜೂರಾತಿ ಸಮಿತಿ ಸಭೆಯ ನಡವಳಿ.

******

ಸ್ವತ್ತಿನ ಸಂಖ್ಯೆ: ನಂ.17 (758), 8ನೇ ಅಡ್ಡರಸ್ತೆ, ಎಂಆರ್‌ಸಿಆರ್, ಗೋವಿಂದರಾಜನಗರ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಸ್ಟಿಲ್ಟ್, ನೆಲ, 1ನೇ, 2ನೇ ಮತ್ತು ಟೆರೇಸ್ ಅಂತಸಿನ್ನ "ವಾಣಿಜ್ಯ/ಹಾಸ್ಟೆಲ್" ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ.ಸಂಖ್ಯೆ: Ad.Com/WST/0605/19-20, ದಿನಾಂಕ: 04/11/2019 ರಂದು ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉಲ್ಲೇಖ(2) ರಲ್ಲಿನ ಅರ್ಜಿದಾರರ ಮನವಿಯ ಮೇರೆಗೆ "ವಾಣಿಜ್ಯ/ಹಾಸ್ಟೆಲ್" ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 05/12/2019 ರಂದು ಸ್ವತ್ತಿನ ಸ್ಥಳವನ್ನು ಪರಿಶೀಲಿಸಿದ್ದು, ಅರ್ಜಿದಾರರು ವಲಯ ನಿಯಮಾವಳಿಯಂತೆ, ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ/ಕಬ್ಬಿಣದ ಕಂಬಗಳನ್ನು ಅಳವಡಿಸಿರುತ್ತಾರೆ. ಉಲ್ಲೇಖ (3) ರಲ್ಲಿ ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪಶ್ಚಿಮ ವಲಯದ ನಕ್ಷೆ ಮಂಜೂರಾತಿ ಸಮಿತಿಯು ಅನುಮೋದಿಸಿರುವ ಮೇರೆಗೆ, ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ.33,000/- (D.D.No:524074, Dt:21/12/2019, ICICI Bank, Vijyanagara Branch, Rs.33,000/-) ಗಳನ್ನು ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ ಡಿ.ಡಿ.ಯ ರಸೀತಿ ಸಂಖ್ಯೆ:RE-ifms210—TP/000034, ದಿನಾಂಕ:27/12/2019 ರಂದು ಸಂದಾಯಿಸಿಕೊಳ್ಳಲಾಗಿದೆ. "ವಾಣಿಜ್ಯ/ಹಾಸ್ಟೆಲ್" ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು. ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿಯ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ, ನಿಗಧಿತ ಅವಧಿಯೊಳಗೆ ಅಗತ್ಯ ಮಾರ್ಪಾಡು ನಕ್ಷೆಗೆ ಮಂಜೂರಾತಿ ಪಡೆದು ನಂತರ ಕಾಮಗಾರಿಯನ್ನು ಮುಂದುವರೆಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ, ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ, ಅಗತ್ಯ ಸಂಖ್ಯೆಯ ವಾಹನ ನಿಲ್ದಾಣಕ್ಕೆ ಸ್ಥಳಾವಕಾಶವನ್ನು ಕಾಯ್ದಿರಿಸುವುದು.
4. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ, ಕೆಲಸಗಾರರಿಗಾಗಿ ತಾತ್ಕಾಲಿಕ ಶೌಚಾಲಯವನ್ನು ನಿರ್ಮಿಸತಕ್ಕದ್ದು.
5. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

Kavitha M 27/12
ಸಹಾಯಕ ನಿರ್ದೇಶಕರು,
ನಗರ ಯೋಜನೆ (ಪಶ್ಚಿಮ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

27/12

ಇವರಿಗೆ:-

Dr|| Nischal K C @ Nischal c kuchangi & Dr|| Urmila Nischal
ನಂ.17 (758), 8ನೇ ಅಡ್ಡರಸ್ತೆ, ಎಂಆರ್‌ಸಿಆರ್,
ಗೋವಿಂದರಾಜನಗರ, ಬೆಂಗಳೂರು.

ಪ್ರತಿಯನ್ನು:- ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ)/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗೋವಿಂದರಾಜನಗರ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

Scanned with CamScanner